# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 192 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲೆ ಹುಮನಾಬಾದ ಎ.ಪಿ.ಎಂ.ಸಿ., ಮಾರುಕಟ್ಟೆಯಲ್ಲಿ ರಸ್ತೆ, ಚರಂಡಿ ಶೌಚಾಲಯ, ಕುಡಿಯುವ ನೀರು, ಬೀದಿ ದೀಪ ಹಾಗೂ ಇತರ ಸೌಲಭ್ಯವಿಲ್ಲದ ಮತ್ತು ಕಳೆದ 15 ವರ್ಷಗಳಿಂದ ಹಿಂದೆ ನಿರ್ಮಿಸಿದ ರೈತ ಭವನ ಉಪಯೋಗ ಮಾಡದೇ ರೈತರಿಗೆ ರಾತ್ರಿ ತಂಗಲು ಸೂಕ್ತ ವ್ಯವಸ್ಥೆಯಿಲ್ಲದ ರೈತರು ಮತ್ತು ವರ್ತಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು; | -ಹೌದು-<br><br>ಬೀದರ ಜಿಲ್ಲೆಯ ಹುಮನಾಬಾದ್ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಬಾರ್ಡ್ ಅನುದಾನದಡಿ ಹಾಗೂ ಸಮಿತಿಯ ಸ್ವಂತ ನಿಧಿಯಿಂದ ಈ ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಕೈಗೊಳ್ಳಲಾಗಿರುತ್ತದೆ:-<br><br>1. ನಬಾರ್ಡ್ WIF 2014-15 ರ ಯೋಜನೆ ಯಡಿಯಲ್ಲಿ ರೂ. 156.70 ಲಕ್ಷಗಳ ಮೊತ್ತದಲ್ಲಿ ಸಿ.ಸಿ ರಸ್ತೆ ಹಾಗೂ ಚರಂಡಿ ನಿರ್ಮಿಸಲಾಗಿರುತ್ತದೆ.<br>2. ನಬಾರ್ಡ್ RIDF-21 ರ ಯೋಜನೆಯಡಿ ರೂ. 44.00 ಲಕ್ಷಗಳ ಮೊತ್ತದಲ್ಲಿ ಸಿ.ಸಿ.ರಸ್ತೆ ಚರಂಡಿ ಮತ್ತು ಆಂತರಿಕ ರಸ್ತೆಗಳನ್ನು ನಿರ್ಮಿಸಲಾಗಿರುತ್ತದೆ.<br><br>3. ನಬಾರ್ಡ್ RIDF-24 ರ ಯೋಜನೆಯಡಿ ರೂ. 190.00 ಲಕ್ಷಗಳ ಮೊತ್ತದಲ್ಲಿ ಸಿ.ಸಿ ರಸ್ತೆ ಹಾಗೂ ಚರಂಡಿ ನಿರ್ಮಿಸಲಾಗಿರುತ್ತದೆ.<br><br>4. ಬೀದರ ಜಿಲ್ಲಾ ಪಂಚಾಯತ ಅನುದಾನದಡಿ 2009-2010ನೇ ಸಾಲಿನಲ್ಲಿ ರೈತ ಭವನ ನಿರ್ಮಿಸಲಾಗಿದ್ದು, ಸುಸಜ್ಜಿತವಾಗಿರುತ್ತದೆ.<br><br>5. ಹುಮನಾಬಾದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಶೌಚಾಲಯ ನಿರ್ಮಿಸಲು ಸ್ಥಳವನ್ನು ಹಂಚಿಕೆ ಮಾಡಲಾಗಿದ್ದು, ಶೌಚಾಲಯದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>6. ಹುಮನಾಬಾದ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 01 ಶುದ್ಧ ಕುಡಿಯುವ ನೀರಿನ<br><br>7. ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಬೀದಿದೀಪ ವ್ಯವಸ್ಥೆಯನ್ನು ಘಟಕವನ್ನು ಸ್ಥಾಪಿಸಲಾಗಿರುತ್ತದೆ.<br><br>8. ಹುಮನಾಬಾದ ಕಲ್ಪಿಸಲಾಗಿರುತ್ತದೆ. |

| | | |
|---|---|---|
| ಆ | ಈ ಎ.ಪಿ.ಎಂ.ಸಿ ಮಾರುಕಟ್ಟೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು) | ಮಾರುಕಟ್ಟೆ ಪ್ರಾಂಗಣಕ್ಕೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಸಮಿತಿಯ ಆದಾಯ ಹಾಗೂ ಸರ್ಕಾರದ ಅನುದಾನದ ಲಭ್ಯತೆಗನುಗುಣವಾಗಿ ಕಲ್ಪಿಸುವುದು ನಿರಂತರ ಪ್ರಕ್ರಿಯೆಯಾಗಿರುತ್ತದೆ. |

**ಸಂಖ್ಯೆ: ಸಿಒ 181 ಎಂಆರ್‌ಇ 2025**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರ ಹಾಗೂ ಕೃಷಿ
ಮಾರುಕಟ್ಟೆ ಸಚಿವರು.